ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 01ಎಸ್‌ಪಿಎಸ್ (01) 2017

ನಿರ್ದೇಶಕರವರ ಕಛೇರಿ
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ:21/12/2018

# ಸುತ್ತೋಲೆ

ವಿಷಯ: 2017-18 ನೇ ಶೈಕ್ಷಣಿಕ ವರ್ಷದಲ್ಲಿ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಮತ್ತು ಸರ್ಕಾರಿ/ಅನುದಾನಿತ ಇಂಜಿನೀಯರಿಂಗ್ ಹಾಗೂ ಆರ್ಕಿಟೆಕ್ಚರ್ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಉಚಿತವಾಗಿ ಲ್ಯಾಪ್‌ಟಾಪ್‌ಗಳನ್ನು ಕಲಿಕಾ ಸಾಮಗ್ರಿಯಾಗಿ ಒದಗಿಸುವ ಬಗ್ಗೆ. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ಇವರ ಪತ್ರ ಸಂಖ್ಯೆ: ಕಾಶಿಇ/ಮಾತಂವಿ/57/ಲ್ಯಾಪ್‌ಟಾಪ್‌ವಿತರಣೆ/2017-18 ದಿ:20/02/2018

ಉಲ್ಲೇಖ: 1.ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ಇವರ ಪತ್ರ ಸಂಖ್ಯೆ: ಕಾಶಿಇ/ಮಾತಂವಿ/57/ಲ್ಯಾಪ್‌ಟಾಪ್‌ವಿತರಣೆ/2017-18 ದಿ:20/02/2018
2.ಈ ಕಛೇರಿ ಸುತ್ತೋಲೆ ಸಂಖ್ಯೆ: ಡಿಟಿಇ 01ಎಸ್‌ಪಿಎಸ್ (01) 2017 ದಿ:21/02/2018

********

ಉಲ್ಲೇಖದ ಪತ್ರದಲ್ಲಿ (1) ಮತ್ತು(2) ರಲ್ಲಿ ಪ್ರತಿ ಕಾಲೇಜಿನಲ್ಲಿ ಕನಿಷ್ಠ 03 ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್‌ನೀಡುವ ಮೂಲಕ ಯೋಜನೆಯನ್ನು ಸಾಂಕೇತಿಕವಾಗಿ ಪ್ರಾರಂಭಿಸಲು ಕೈಗೊಂಡ ತೀರ್ಮಾನದಂತೆ, ದಿ:27/02/2018 ರಂದು ಸಂಜೆ 04.30 ಗಂಟೆಗೆ ವಿಧಾನ ಸೌಧದ "ಬ್ಯಾಂಕ್ವೆಟ್ ಹಾಲ್‌ನಲ್ಲಿ" ಸಾಂಕೇತಿಕವಾಗಿ ಲ್ಯಾಪ್‌ಟಾಪ್‌ಗಳ ವಿತರಣಾ ಸಮಾರಂಭದಂದು ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಂದ ಕರೆತಂದ ಪ್ರತಿ ಕಾಲೇಜಿನ ಅರ್ಹ ವಿದ್ಯಾರ್ಥಿಗಳ ಪೈಕಿ ಒಬ್ಬ ವಿದ್ಯಾರ್ಥಿಗೆ ಲ್ಯಾಪ್‌ಟಾಪ್‌ಗಳನ್ನು ವಿತರಿಸಲಾಗಿದೆ.

ಉಳಿದಂತೆ ಪ್ರತಿ ಕಾಲೇಜಿಗೆ 02 ಲ್ಯಾಪ್‌ಟಾಪ್‌ಗಳಂತೆ ಕಾಲೇಜು ಶಿಕ್ಷಣ ಇಲಾಖೆಯಿಂದ ನೇರವಾಗಿ ಸರಬರಾಜುದಾರರಾದ ಮೆ॥ ನೈನ್‌ರಿಚ್ ಇನ್ಫೋಟೆಕ್-ಬೆಂಗಳೂರು ಇವರ ಮುಖಾಂತರ ಸರಬರಾಜು ಆಗಿರುವುದು ಗಮನಕ್ಕೆ ಬಂದಿರುತ್ತದೆ. ಆದ್ದರಿಂದ 2017-18 ನೇ ಸಾಲಿನ ಪ್ರಥಮವರ್ಷದ(ಹಾಲಿ2018-19ನೇ ಸಾಲಿನಲ್ಲಿ ದ್ವಿತೀಯಾವರ್ಷ) ರೂ.2.5 ಲಕ್ಷ ಆದಾಯ ಮಿತಿಯ ಅರ್ಹ ಫಲಾನುಭವಿ ವಿದ್ಯಾರ್ಥಿಗಳಲ್ಲಿ 02 ವಿದ್ಯಾರ್ಥಿಗಳನ್ನು ಉಲ್ಲೇಖ(2) ರಲ್ಲಿ ಸೂಚಿಸಿದಂತೆ ಪಾರದರ್ಶಕವಾಗಿ ಆಯ್ಕೆ ಮಾಡಿ ವಿತರಿಸಿ ವಿತರಿಸಿದ ಮಾಹಿತಿಯನ್ನು ಕೇಂದ್ರಕಛೇರಿಗೆ ಸಲ್ಲಿಸಲು ಈ ಮೂಲಕ ಸೂಚಿಸಲಾಗಿದೆ.

ನಿರ್ದೇಶಕರು

8/1/19

ಪ್ರತಿ:

1.ಇಲಾಖೆಯ ಅಧೀನದಲ್ಲಿ ಬರುವ ಎಲ್ಲಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳು ಮತ್ತು ಸರ್ಕಾರಿ/ಅನುದಾನಿತ ಇಂಜಿನೀಯರಿಂಗ್ ಕಾಲೇಜುಗಳ ಪ್ರಿನ್ಸಿಪಾಲರುಗಳಿಗೆ ಸೂಕ್ತ ಕ್ರಮಕ್ಕಾಗಿ

2. ಇ-ಆಡಳಿತ ವಿಭಾಗಕ್ಕೆ ಇಲಾಖೆಯ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲು ಸೂಚಿಸಲಾಗಿದೆ.